ಆ) ಇಲ್ಲ

No

ಇ) ಫೋರ್ಜರಿ ಕರಾರು ಯಾವುದು ಮಾಡಿರುವುದಿಲ್ಲ.

There are no Forgery Agreements.

ನೀರಾವರಿ ಸೌಲಭ್ಯ ಒದಗಿಸಲು ಯೋಜನೆ ಸಿದ್ಧವಾಗಿದ್ದರೂ ಪ್ರಾರಂಭಿಸದಿರುವುದು

326 (536) ಶ್ರೀ ಜೆ. ಟಿ. ಪಾಟೀಲ (ಬೀಳಗಿ) : ಮಾನ್ಯ ಭಾರೀ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೀಳಗಿ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಹುಲ್ಯಾಳ - ಹುಣಸೀಕಟ್ಟಿ ಗ್ರಾಮಗಳಿಗೆ ಫೆಟಪ್ರಭಾ ಎಡದಂಡೆ ಕಾಲುವೆ ಮುಖಾಂತರ ಹೆಚ್ಚಿನ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಯೋಜನೆ ಸಿದ್ಧವಾಗಿ ಆಡಳಿತಾತ್ಮಕ ಮಂಜೂರಾತಿ ದೊರಕಿದ ನಂತರವೂ ಪ್ರಾರಂಭಿಸದೇ ಇರಲು ಕಾರಣವೇನು;

ಆ) ಹಾಗಿದ್ದಲ್ಲಿ ಹಣಕಾಸಿನ ತೊಂದರೆ ಇದೆಯೇ; ಹಾಗಿಲ್ಲದಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :

ಅ) ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೀಳಗಿ ಕ್ಷೇತ್ರದ ಸಾವಳಗಿಯಲ್ಲಿ 110 ಕೆ.ವಿ. ವಿದ್ಯುತ್ ಸ್ಟೇಷನ್ ಸ್ಥಾಪಿಸುವುದು

327 (538) ಶ್ರೀ ಜೆ. ಟಿ. ಪಾಟೀಲ (ಬೀಳಗಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಬೀಳಗಿ ಮತಕ್ಷೇತ್ರದ ಸಾವಳಗಿಯಲ್ಲಿ 4 ತಿಂಗಳ ಹಿಂದೆ 110 ಕೆ.ವಿ. ವಿದ್ಯುತ್ ಸ್ಟೇಷನ್‌ನ್ನು ಸ್ಥಾಪಿಸಲು ಅಡಿಗಲ್ಲು ಸಮಾರಂಭ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಕಾಮಗಾರಿ ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಹೌದು ಬಂದಿದೆ

ಆ) ಮಂಡಳಿಯ ತಾಂತ್ರಿಕ ಸಮಿತಿಯ ನಿರ್ಧಾರದಂತೆ ಸದರಿ ಕಾಮಗಾರಿಯ ವೆಚ್ಚವನ್ನು ಭರಿಸುವಂತೆ ಆಯುಕ್ತರು, ಕೃಷ್ಣಾ ಮೇಲ್ದಂಡೆ ಯೋಜನೆ (ಆರ್ ಮತ್ತು ಆರ್) ಬಾಗಲಕೋಟೆ ಇವರನ್ನು ಕೋರಲಾಗಿದೆ. ಅವರಿಂದ ಈ ಹಣವು ಸಂದಾಯವಾದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕ್ಕೊಳ್ಳಲಾಗುವುದು.